| ವಿಧಾನ ಪರಿಷತ್ತು | |
|---|---|
| **ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:** | 817 |
| **ಸದಸ್ಯರ ಹೆಸರು:** | ಡಾ\|\|ಎಂ.ಜಿ ಮುಳೆ (ವಿಧಾನಸಭಾ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ:** | 15.12.2025 |
| **ಉತ್ತರಿಸುವವರು:** | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕರಕುಂಜೆ ಗ್ರಾಮ ವ್ಯಾಪ್ತಿಯ ಕಡೋಣಿ ಎಂಬ ಸ್ಥಳದಲ್ಲಿ ಚಕ್ರ ನದಿ ಮತ್ತು ರಕ್ಷಿತ ಅರಣ್ಯಕ್ಕೆ ಹೊಂದಿಕೊಂಡಿರುವ ಖಾಸಗಿ ವ್ಯಕ್ತಿಗೆ ಸೇರಿರುವ ಸರ್ವೆ ಸಂಖ್ಯೆ: 368/1 ಗೆ ಹೊಂದಿಕೊಂಡಿರುವ ಅರಣ್ಯ ಭೂಮಿಯನ್ನು ಖಾಸಗಿ ವ್ಯಕ್ತಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ವಿದ್ಯುತ್ ತಂತಿ ಬೇಲಿಯನ್ನು ಅಕ್ರಮವಾಗಿ ಅಳವಡಿಸಿರುವುದನ್ನು ತೆರವು ಗೊಳಿಸಿ ವನ್ಯಜೀವಿಗಳ ಮತ್ತು ಮನುಷ್ಯರ ಜೀವ ಹಾನಿ ಸಂಭವವನ್ನು ತಪ್ಪಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳಿಂದ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೇ (ಸಂಪೂರ್ಣ ವಿವರ ನೀಡುವುದು) | ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕರಕುಂಜೆ ಗ್ರಾಮದ ಸರಕಾರಿ ಜಮೀನು ಸರ್ವೆ ನಂ.120 ರಲ್ಲಿ 2.96 ಎಕರೆ ಜಮೀನು ನಮೂನೆ 53ರ ಅರ್ಜಿಯಂತೆ ಅಕ್ರಮ-ಸಕ್ರಮ ಸಮಿತಿಯ ನಿರ್ಣಯ ಸಂಖ್ಯೆ 13/2004 ರಂತೆ ಎನ್.ಸಿ.ಆರ್. 138/2004-05 ದಿನಾಂಕ:24-11-2004ರಂತೆ ಜ್ಯೋತಿ ಎಸ್ ಶೆಟ್ಟಿ ಕೊಂ ಶಂಕರ ಶೆಟ್ಟಿ ರವರಿಗೆ 2004ರಲ್ಲಿ ಜಮೀನು ಮಂಜೂರು ಆಗಿರುತ್ತದೆ.. ಮಂಜೂರಾತಿ ನಂತರ ಹೊಸ ಸರ್ವೆ ನಂಬರ್: 368/1, 368/3 ಆಗಿರುತ್ತದೆ ಹಾಗೂ ಪಹಣಿಯಲ್ಲಿ ಜ್ಯೋತಿ ಎಸ್ ಶೆಟ್ಟಿ ಕೊಂ ಶಂಕರ ಶೆಟ್ಟಿ ಇವರ ಹೆಸರು ನಮೂದಾಗಿರುತ್ತದೆ. ಈ ಜಮೀನಿನ ಸುತ್ತಲೂ ಸೋಲಾರ್ ತಂತಿ ಬೇಲಿ ನಿರ್ಮಿಸಿರುತ್ತಾರೆ.<br><br>ತಹಶೀಲ್ದಾರರು, ಕುಂದಾಪುರ ತಾಲೂಕು ಇವರು ಮಾಹಿತಿರನ್ವಯ ಸದರಿ ಸ.ನಂ: 120 ರಲ್ಲಿ 2.96 ಎಕರೆ ಮಂಜೂರಾಗಿರುವ ಜಮೀನಿನ ಬಳಿ ಇರುವ ಚಕ್ರಾ ನದಿ ಪೊರಂಬೋಕು ಜಮೀನಾಗಿರುವುದಿಲ್ಲ. ಕರ್ಕುಂಜೆ ಗ್ರಾಮದ ಸ.ನಂ.120 ರಲ್ಲಿ ಮಂಜೂರಾಗಿರುವ 2.96 ಎಕರೆ ಜಮೀನು ಸರ್ಕಾರಿ ಸ.ನಂ. 102 ರಲ್ಲಿ ಹಾದು ಹೋಗಿರುವ ಚಕ್ರಾ ನದಿಯಿಂದ 30.00ಮೀಟರ್ ಅಂತರದಲ್ಲಿದೆ ಹಾಗೂ 30.00 ಮೀಟರ್ ಅಂತರದ ಮಧ್ಯದಲ್ಲಿರುವ ಜಮೀನು ಸ.ನಂ.102 ರ ಸರ್ಕಾರಿ ಜಮೀನಾಗಿರುತ್ತದೆ<br><br>ಸದರಿ ಮಂಜೂರಾತಿ ಜಮೀನಿಗೆ ಹೊಂದಿಕೊಂಡು, ಚಿತ್ತೂರು ಗ್ರಾಮದ ಸರ್ವೆ ನಂ.102 ಇದ್ದು, ಈ ಸ್ಥಳದಲ್ಲಿ ಪುಷ್ಪಲತಾ ಶೆಟ್ಟಿ (ಜ್ಯೋತಿ ಎಸ್ ಶೆಟ್ಟಿ ಕೊಂ ಶಂಕರ ಶೆಟ್ಟಿ ರವರ |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಮಗಳು)ರವರು ಒತ್ತುವರಿ ಮಾಡಿ ತಂತಿ ಬೇಲಿಯನ್ನು ನಿರ್ಮಿಸಿರುತ್ತಾರೆ.<br>ಸದರಿ ಚಿತ್ತೂರು ಗ್ರಾಮದ ಸರ್ವೆ ನಂ.102ರ ಪಹಣಿ ಪತ್ರಿಕೆ ಪರಿಶೀಲಿಸಲಾಗಿ, ಕಲಂ ನಂ. 9ರಲ್ಲಿ 'ಸರಕಾರ' ಎಂದು ನಮೂದು ಇರುತ್ತದೆ. ಈ ಪ್ರದೇಶದ ಗಡಿಯಲ್ಲಿ ತಂತಿ ಬೇಲಿಯನ್ನು ನಿರ್ಮಾಣ ಮಾಡಿರುತ್ತಾರೆ. ಹಾಗೂ ಸದರಿ ಪ್ರದೇಶ ಮಾವಿನಗುಳಿ ಮೀಸಲು ಅರಣ್ಯದ ಗಡಿರೇಖೆಯಿಂದ ಹೊರಗೆ ಇರುತ್ತದೆ. ಈ ಸ್ಥಳದಲ್ಲಿ ಚಿತ್ತೂರು ಗ್ರಾಮದ ಸರ್ವೆ ನಂಬರ್ 102ರಲ್ಲಿ 2.60 ಎಕರೆ ವಿಸ್ತೀರ್ಣ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ನೋಂದಣಿ ಸಂಖ್ಯೆ BHM 3981DF6FC19D4 ದಿನಾಂಕ: 21-03-2023 ರಂದು ತಹಶೀಲ್ದಾರರು, ಕುಂದಾಪುರ ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ.<br>ರಕ್ಷಿತಾರಣ್ಯದ ಗಡಿಯಲ್ಲಿ ಇಲಾಖಾ ವತಿಯಿಂದ ಕಂದಕ ನಿರ್ಮಿಸಿದ್ದು, ಅರಣ್ಯ ಪ್ರದೇಶದ ಒಳಗಡೆ ಯಾವುದೇ ಅರಣ್ಯ ಭೂಮಿ ಒತ್ತುವರಿ ಆಗಿರುವುದಿಲ್ಲ. |

**ಸಂಖ್ಯೆ: FEE/189/FGL/2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.